ಮನೆಯಲ್ಲಿದ್ದ. ಗುರುಗಳ ನಿವಾಸವನ್ನು ಅತ್ಯಾಧುನಿಕವಾಗಿ ಸಕಲ ಸವಲತ್ತುಗಳೊಂದಿಗೆ ಹೊಸದಾಗಿ ನಿರ್ಮಿಸಲಾಗಿತ್ತು.

ಗುರುಗಳ ಊಟ ಆಗಷ್ಟೇ ಮುಗಿದಿತ್ತಾದರೂ ಬಷ್ತೀಸನೊಡನೆ ಎರಡು ಮಾತನಾಡಲು ತಮ್ಮ ಎಂದಿನ ಮಧ್ಯಾಹ್ನದ ಸವಿ ನಿದ್ದೆಯನ್ನು ತ್ಯಾಗ ಮಾಡಲು ಅವರು ಸಿದ್ಧರಾಗಿದ್ದರು.

ಹಿಂದಿನ ಬಾರಿ ಭೇಟಿಯಾದ ಸುಮಾರು ಒಂದು ವರ್ಷದ ಅನಂತರ ಬಷ್ತೀಸ ಎರಡನೆಯ ಬಾರಿ ಗುರುಗಳನ್ನು ಕಾಣಲು ಬಂದಿದ್ದ. ಈ ಒಂದು ವರ್ಷದಲ್ಲಿ ಅವನ ಜೀವನದಲ್ಲಿ ಬಹಳಷ್ಟು ಬದಲಾವಣೆಗಳಾಗಿದ್ದವು. ಸುಧಾಕರನ ಜತೆಗಿನ ವ್ಯವಹಾರದಿಂದಾಗಿ ಅವನ ಹಣಕಾಸಿನ ಸ್ಥಿತಿ ತುಂಬಾ ಸುಧಾರಿಸಿತ್ತು. ಕ್ರೈಸ್ತ ಸಂತರ ಇಮಾಜುಗಳೊಂದಿಗೆ ಅವನು ಸುಧಾಕರನಿಗೆ ಹಿಂದೂ ದೇವ ದೇವಿಯರ ಮೂರ್ತಿಗಳನ್ನೂ ಮಾಡಿಕೊಡುತ್ತಿದ್ದ. ಈಗಲೂ ಮಂದಾರ ಬಯಲಿನಿಂದಲೇ ಆವೆ ಮಣ್ಣನ್ನು ತರುತ್ತಿದ್ದ. ತಲೆ ಮೇಲೆ ಹೊತ್ತಾಗಲೀ ಅಥವ ಕಿಲಾತನ ಗಾಡಿಯಿಂದ ತರುತ್ತಿದ್ದ ಮಣ್ಣು ಯಾವುದಕ್ಕೂ ಸಾಲುತ್ತಿರಲಿಲ್ಲ. ಈಗ ಹಸನಬ್ಬ ಬ್ಯಾರಿಯ ಲಾರಿಯಿಂದ ಅವನ ಅಂಗಳಕ್ಕೆ ಮಣ್ಣು ಬಂದು ಬೀಳುತ್ತಿತ್ತು. ಮಣ್ಣು ತುಳಿದು ಹದ ಮಾಡಲು ಮತ್ತು ತಯಾರಾದ ಮೂರ್ತಿಗಳನ್ನು ಬೆಂಕಿಯಲ್ಲಿ ಬೇಯಿಸಲು ಹೊರಗಿನ ನಾಲ್ಕು ಜನರು ಕೆಲಸ ಮಾಡುತ್ತಿದ್ದರು. ಊರೂರು ತಿರುಗಿ ವ್ಯಾಪಾರ ಕುದುರಿಸಿ ತರಲು ಸುಧಾಕರ ತನ್ನ ತಂಗಿಯ ಇಬ್ಬರು ಹುಡುಗರನ್ನು ನೇಮಿಸಿದ್ದ. ಬಷ್ತೀಸನಿಗೆ ಈಗ ಅಂಡು ಕೆರೆದುಕೊಳ್ಳಲೂ ಪುರುಸೊತ್ತಿರಲಿಲ್ಲ. ಬಷ್ತೀಸನ ಬಳಿ ಮತ್ತೆ ಹಣ ಸೇರತೊಡಗಿತ್ತು. ಒಂದು ವರ್ಷದೊಳಗೆ ಅವನ ದೆಸೆಯೇ ಬದಲಾಗಿತ್ತು.



ಈ ಬಾರಿ ಧರ್ಮಗುರುಗಳ ಮುಂದೆ ಬಷ್ತೀಸ ಕೊಂಚ ಸೆಟೆದುಕೊಂಡೇ ನಿಂತುಕೊಂಡಿದ್ದ. ಕೈಗಳನ್ನು ಜೋಡಿಸಿ, ನಡು ಬಗ್ಗಿಸಿ ನಿಲ್ಲದೆ ಆತ್ಮವಿಶ್ವಾಸದಿಂದ ಗುರುಗಳ ದೃಷ್ಟಿಗೆ ದೃಷ್ಟಿಕೊಡುತ್ತಾ ನಿಂತುಕೊಂಡಿದ್ದ.